ಮತ್ತೇನೊ. ಅದು ಮೀನು ಅನ್ನುವುದು ಮುಟ್ಟಿದಾಗ ಗೊತ್ತಾಯಿತು. ಹೋಟೆಲಲ್ಲಿ ತಿಂದ ರೂಢಿಯಿತ್ತು. ಯಾವುದಕ್ಕು ಮಸಾಲೆಯಿಲ್ಲ, ಹಳ್ಳದ ದಂಡೆಯಲ್ಲಿ ಬೆಳೆವ ಸೂಜಿಮೆಣಸು ಮತ್ತೆ ಉಪ್ಪು. ಹಸಿವೆಗೊ ಏನೋ ನಾಲಗೆ ಇಷ್ಟಪಟ್ಟು ಸ್ವೀಕರಿಸಿತು. ಯಜಮಾನ ಅಂಗೈಯಲ್ಲಿ ಯಾವುದೊ ಪುಡಿಯನ್ನು ತಿಕ್ಕಿ ಹದಬರಿಸಿ ಬಾಯೊಳಗೆ ತುಂಬಿಕೊಂಡು ಹಳ್ಳದ ದಿಕ್ಕಿಗೆ ನೋಡುತ್ತ ಕುಳಿತ. ಹೆಂಗಸರಿಬ್ಬರು ಇವನಿಗೆ ಕೇಳದಂತೆ ಕೆಳದನಿಯಲ್ಲಿ ಸಂಭಾಷಿಸುತ್ತಿದ್ದರು. ಸ್ವಲ್ಪ ಸಮಯದಲ್ಲಿ ಹುಲ್ಲಲ್ಲಿ ಹೆಣೆದ ಹರಕು ಚಾಪೆಯನ್ನು ಇವನಿಗೂ ಯಜಮಾನನಿಗೂ ಕೊಟ್ಟ ಹುಡುಗಿ ಮತ್ತೊಬ್ಬಳೊಂದಿಗೆ ಗುಡಿಸಲೊಳಗೆ ಸೇರಿಕೊಂಡಳು. ಯಜಮಾನನ ಸಂಜ್ಞೆಯಂತೆ ಕಿರಿದಾದ ಅಂಗಳದಲ್ಲಿ ಚಾಪೆ ಬಿಡಿಸಿಕೊಂಡು ಮಲಗಿದ. ಆಕಾಶದಲ್ಲಿ ತಾರೆಗಳ ಸಮೃದ್ಧಿ ದಂಗುಬಡಿಸುವಂತಿತ್ತು. ಬೆಂಗಳೂರು ಬಿಡು, ತಮ್ಮೂರಲ್ಲು ಹೀಗೆ ಕಂಡ ನೆನಪಿಲ್ಲ. ಸುತ್ತೆಲ್ಲ ಅರಣ್ಯ, ಕಾಡುಪ್ರಾಣಿಗಳು ಬಂದರೆ ಅನಿಸಿ ಭಯವಾಯಿತು. ಇವರೆಲ್ಲ ಇಲ್ಲೆ ವಾಸಿಸುವವರು ಅಂದಮೇಲೆ ತನಗೆ ಮಾತ್ರ ಏನು ಅನ್ನುವ ತಾತ್ಸಾರ ಮೂಡಿತು. ಹೌದು ಯಾರಿವರು? ಒಂದು ತರಗೆಲೆಗೂ ಅದರದ್ದೆ ಇತಿಹಾಸವಿರುತ್ತದೆ. ಅದೊಮ್ಮೆ ಚಿಗುರೆಲೆಯಾಗಿ ಇಂತಹದ್ದೆ ಅನ್ನುವ ಪ್ರಭೇದದ ಗಿಡದ ಕೊಂಬೆಯಲ್ಲಿದ್ದು, ಬಿಸಿಲಲ್ಲಿ ಕಾರ್ಬೋಹೈಡ್ರೇಟ್ ಉತ್ಪಾದಿಸಿ ಹಣ್ಣಾಗಿ ಬಿದ್ದು ಒಣಗಿ ಹೋಗುತ್ತದೆ. ಅಂತಿರುವಾಗ ಮನುಷ್ಯ ಮಾತ್ರದವರಾದ ಇವರಿಗೆ ಹಿನ್ನೆಲೆ, ವಿವರ ಇರುವುದಿಲ್ಲವೆ? ತಾನು ಇಷ್ಟು ಹೊತ್ತಿಗೆ ಅದನ್ನೆಲ್ಲ

